ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಮಂಗಳವಾರ ೩ನೇ ಏಪ್ರಿಲ್ ೧೯೯೦, ಚೈತ್ರ ೧೩, ೧೯೧೨ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೯-೦೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಎಸ್. ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದರು.]

ಪ್ರಶ್ನೋತ್ತರಗಳು

ಚುಕ್ಕೆಗುರುತಿನ ಪ್ರಶ್ನೆಗಳಿಗೆ ನೀಡಲಾದ ಮೌಖಿಕ ಉತ್ತರಗಳು

(ದಿನಾಂಕ ೩೦ನೇ ಮಾರ್ಚ್ ೧೯೯೦ರ ೯ನೇ ಪಟ್ಟಿಯಿಂದ ಮುಂದೂಡಲಾದ ಪ್ರಶ್ನೆಗಳು)

ಚುಕ್ಕೆ ಪ್ರಶ್ನೆ ೪೦೨— ಮಾನ್ಯ ಸದಸ್ಯರು ಗೈರು ಹಾಜರಿ.

ಮಂಡ್ಯ ನಗರದ ಕಾಲೇಜಿನಲ್ಲಿ ಓದುತ್ತಿರುವ ಪರಿಶಿಷ್ಟ ಜಾತಿಯ ಬಾಲಕರಿಗೆ ಹಾಸ್ಟಲ್ ಕಟ್ಟಡದ ಬಗ್ಗೆ.

೪೨೪. ಶ್ರೀ ಎಂ. ಎಸ್. ಆತ್ಮಾನಂದ (ಮಂಡ್ಯ).—ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಂಡ್ಯ ನಗರದ ಕಾಲೇಜಿನಲ್ಲಿ ಓದುತ್ತಿರುವ ಪರಿಶಿಷ್ಟ ಜಾತಿ ಬಾಲಕರಿಗೆ ಹಾಸ್ಟಲ್ ಕಟ್ಟಡವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಹಾಸ್ಟಲ್ ಕಟ್ಟಡದ ಸೌಲಭ್ಯವನ್ನೊದಗಿಸಲು ಸರ್ಕಾರವು ಏನು ಕ್ರಮ ಕೈಗೊಳ್ಳುತ್ತಿದೆ ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು).—

ಅ) ಸರ್ಕಾರದ ಗಮನಕ್ಕೆ ಬಂದಿದೆ,

ಆ) ಮಂಡ್ಯ ನಗರದ ಸರ್ವೆ ನಂ. ೧೩೦/೨ರಲ್ಲಿ ೧೦೦' × ೧೩೦' × ೨೦೦' ಆಳತೆಯ ನಿವೇಶನವನ್ನು ಸದರಿ ಕಾಮಗಾರಿಗೆ ಒದಗಿಸಿಕೊಳ್ಳಲಾಗಿದೆ. ರೂ. ೯.೪೬ ಲಕ್ಷಗಳ ಅಂದಾಜಿಗೆ ಮಂಡ್ಯ ಜಿಲ್ಲಾ ಪರಿಷತ್ತು ಆಡಳಿತಾತ್ಮಕ ಮಂಜೂರಾತಿ ನೀಡಿ ಕಾಮಗಾರಿಯನ್ನು ಕರ್ನಾಟಕ ಭೂ ಸೇನಾ ನಿಗಮಕ್ಕೆ ವಹಿಸಿಕೊಟ್ಟಿದೆ. ದಿನಾಂಕ ೫-೨-೧೯೯೦ರಂದು ಕೆಲಸವನ್ನು ಪ್ರಾರಂಭಿಸಿ ಫೆಬ್ರುವರಿ ೧೯೯೦ರ ಅಂತ್ಯದವರೆಗೆ ಕಟ್ಟಡ ಪ್ಲಿಂತ್ ಲೆವೆಲ್‌ವರೆಗೂ ಬಂದಿದೆ.

ಶ್ರೀ ಎಂ.ಎಸ್. ಆತ್ಮಾನಂದ.—ಅಧ್ಯಕ್ಷರೇ ಈ ಹಾಸ್ಟೆಲ್ ಕಟ್ಟಡಕ್ಕೆ ನಗರಸಭೆ ವತಿಯಿಂದ ಹಾಗೂ ಜಿಲ್ಲಾಪರಿಷತ್ತಿನ ವತಿಯಿಂದ ಅವರುಗಳು ವಸ್ತ್ರೂಲಾಡಿದ ಹಣವನ್ನು ಕಳುಹಿಸಿಕೊಟ್ಟಿದ್ದಾರೆ. ಮತ್ತು ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯವರು ಜಿಲ್ಲಾಪರಿಷತ್ತಿನ ಮೂಲಕ ಸರ್ಕಾರದ ಬಾಬತ್ತು ಬರಬೇಕಾದ ಹಣವನ್ನು ಬಿಡುಗಡೆ ಮಾಡಬೇಕೆಂದು ಕೋರಿ ಪತ್ರ ಬರೆದು ಬಹಳ ದಿವಸವಾಯಿತು. ಈ ಹಣ

ಇನ್ನೂ ಬಂದಿರುವುದಿಲ್ಲ. ಆದಲ್ಲದೇ ಕಳೆದ ೧೦ ವರ್ಷಗಳಿಂದ ಈ ಒಂದು ಕಟ್ಟಡದ ಸೌಲಭ್ಯವನ್ನು ಒದಗಿಸಬೇಕೆಂದು ವಿದ್ಯಾರ್ಥಿಗಳ ಹಾಗೂ ಪೋಷಕರ ಒಂದು ಕೋರಿಕೆಯಾಗಿದೆ. ಇದರ ಬಗ್ಗೆ ಇನ್ನೂ ಕೂಡಾ ತೀವ್ರತರವಾದ ಕಾರ್ಯಕ್ರಮವನ್ನು ತೆಗೆದುಕೊಂಡಿರುವುದಿಲ್ಲ ಆದ್ದರಿಂದ ದಯವಿಟ್ಟು ಶೀಘ್ರವಾಗಿ ಈ ಕಟ್ಟಡದ ಕಾರ್ಯವನ್ನು ಮುಗಿಸುತ್ತೀರಾ ?

ಶ್ರೀ ಬಿ. ಶಿವಣ್ಣ.—ಅಲ್ಲಿ ಎರಡು ಫ್ರೀ ಮೆಟ್ರಿಕ್ ಹಾಸ್ಟೆಲ್‌ಗಳು ಹಾಗೂ ಒಂದು ಪೋಸ್ಟ್ ಮೆಟ್ರಿಕ್ ಹಾಸ್ಟೆಲ್ ಇವೆ. ಈಗ ಅಲ್ಲಿ ಕಾಲೇಜು ಹಾಸ್ಟೆಲು ಬೇಕೆಂದು ಹೇಳುತ್ತಿದ್ದಾರೆ. ಜಿಲ್ಲಾ ಪರಿಷತ್ತು ಮತ್ತು ಸರ್ಕಾರದ ವತಿಯಿಂದ ಈ ಬಗ್ಗೆ ೨ ಲಕ್ಷ ಖರ್ಚು ಮಾಡಿ ಕಟ್ಟಡವನ್ನು ಕಟ್ಟಿಸಲಾಗುತ್ತಿದೆ ಈಗ ಅದು ಲಿಂಟಲ್ ಲೆವೆಲ್‌ವರೆಗೆ ಬಂದಿದೆ. ಅದನ್ನು ಲ್ಯಾಂಡ್ ಆರ್ಮಿಯವರಿಗೆ ಕೊಟ್ಟು ಈ ಕಟ್ಟಡವನ್ನು ತ್ವರಿತವಾಗಿ ಮುಗಿಸುವುದಕ್ಕೆ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ. ಅದಕ್ಕೆ ಯಾವ ತೊಂದರೆಯೂ ಇಲ್ಲ.

ಶ್ರೀ ಎಂ. ಎಸ್. ಆತ್ಮಾನಂದ.—ಸರ್ಕಾರದ ವತಿಯಿಂದ ಕೋರಿ ಜಿಲ್ಲಾಪರಿಷತ್ತಿನಿಂದ ಕಾಗದ ಬಂದಿದೆ. ನಾನೂ ಕೂಡಾ ಈ ಬಗ್ಗೆ ಮನವಿ ಕೊಟ್ಟಿದ್ದೇನೆ. ಅಲ್ಲಿ ೧೨-೧೫ ವರ್ಷಗಳಿಂದ ಹಾಸ್ಟೆಲು ಸೌಲಭ್ಯ ಇಲ್ಲದೆ ಪರಿಶಿಷ್ಟ ಜಾತಿ ಮಕ್ಕಳಿಗೆ ಅನಾನುಕೂಲವಾಗಿದೆ. ಹಾಸ್ಟೆಲ್ ಸೌಲಭ್ಯ ಮಾಡ್ಯಾದಲ್ಲಿ ಆಗಬೇಕಾದ್ದರಿಂದ ತಾವು ಹಣವನ್ನು ಕೊಟ್ಟು ಮುಗಿಸುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಬಿ ಶಿವಣ್ಣ —ಆಗಬಹುದು. ಅಧ್ಯಕ್ಷರೇ ಚುಕ್ಕೆ ಪ್ರಶ್ನೆ ೪೦೩ಕ್ಕೆ ಜಿಲ್ಲಾವಾರು ಮಾಹಿತಿ ಬರಬೇಕಾಗಿರುವುದರಿಂದ ಪೇಳಿ ಕೇಳಿ ಪತ್ರ ಬರೆದಿದ್ದೇನೆ.

ಅಧ್ಯಕ್ಷರು.—ಆಯಿತಂ. ಈ ಪ್ರಶ್ನೆಯನ್ನು ಮುಂದೂಡಿದ್ದೇನೆ.

ಬಿಜಾಪುರ ಜಿಲ್ಲೆಯಲ್ಲಿ ಅಕ್ರಮವಾಗಿ ಗ್ರಾನೈಟ್ ಕಲ್ಲನ್ನು ತೆಗೆಯುವುದು

೩೯೮. ಶ್ರೀ ಸಿ. ಎಸ್. ನಾಡಗೌಡ (ಮುದ್ದೆಬಿಹಾಳ್).—ಮಾನ್ಯ ಸಮಾಜ ಕಲ್ಯಾಣ, ಕಾರ್ಮಿಕ ರೇಷ್ಮೆ, ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಿಜಾಪುರದ ವಿವಿಧ ಭಾಗಗಳಲ್ಲಿ ಹೆಚ್ಚಾಗಿ ಗ್ರಾನೈಟ್‌ನ ಅಕ್ರಮ ಕಲ್ಲು ಗಣಿಗಾರಿಕೆ ಮತ್ತು ಮಿಣಜಗಿ ತಾಲ್ಲೂಕು ಮುದ್ದೆಬಿಹಾಳ್‌ನಲ್ಲಿ ನೆಲಹಾಸು ಕಲ್ಲು ಗಣಿಗಾರಿಕೆಯು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಬಂದಿದ್ದರೆ, ಅದನ್ನು ತಡೆಯಲು ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು ?

ಇ) ೧೯೮೮-೮೯ನೇ ಸಾಲಿನಲ್ಲಿ ರಾಜಧನ ರೂಪದಲ್ಲಿ ವಸೂಲು ಮಾಡಿರುವ ರಾಜಸ್ವ ಎಷ್ಟು ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ, ಕಾರ್ಮಿಕ, ರೇಷ್ಮೆ, ಗಣಿ ಮತ್ತು ಭೂವಿಜ್ಞಾನ ಸಚಿವರು).—

ಅ) ಬಂದಿದೆ.

ಆ) ಅಕ್ರಮವಾಗಿ ಕಲ್ಲು ಗಣಿಗಾರಿಕೆ ಮಾಡುವವರ ವಿರುದ್ಧ ವಿವಿಧ ನ್ಯಾಯಾಲಯಗಳಲ್ಲಿ ೮೦ದ್ದಮೆಗಳನ್ನು ಹೂಡಲಾಗಿದೆ.

ಇ) ರೂ. ೨೬,೧೩,೯೪೬-೦೦

ಶ್ರೀ ಸಿ.ಎಸ್. ನಾಡಗೌಡ–ಅಧ್ಯಕ್ಷರೇ, ನಮ್ಮಲ್ಲಿ ಗಣಿಗಳು ಏನಿವೆ, ಅದರಲ್ಲಿಯೂ ನಮ್ಮ ರಾಜ್ಯದಲ್ಲಿ ಈ ಗ್ರಾನೈಟ್ ಎಂಬುದು ರಾಜ್ಯದ ವಜ್ರ ಎಂದರೆ ತಪ್ಪಾಗಲಾರದು. ಇಂತಹ ಬೆಲೆ ಬಾಳುವ ಗ್ರಾನೈಟ್‌ನ್ನು ಮನಸ್ಸೋಚ್ಛೆ ಹಲವಾರು ಜನ ಕ್ವಾರಿ ಮಾಡುತ್ತಿದ್ದಾರೆ. ಹಾಗೂ ಕಾಯ್ದೆಗೆ ವಿರುದ್ಧವಾಗಿ ಸಾಗಾಣಿಕೆ ಮಾಡುತ್ತಿದ್ದಾರೆ. ನಮ್ಮ ಕಾಯ್ದೆಯಲ್ಲೂ ಕೂಡಾ ಕೆಲವು ಲೋಪದೋಷಗಳಿರುವುದರಿಂದ ಅವರ ಮೇಲೆ ಯಾವುದೇ ರೀತಿಯಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ನಾವು ಶಕ್ತಿ ಹೀನರಾಗಿದ್ದೇವೆ ಅದಕ್ಕೋಸ್ಕರ ಈ ಬಗ್ಗೆ ಇರುವ ಕಾಯ್ದೆಯನ್ನು ತಿದ್ದುಪಡಿ ಮಾಡುತ್ತೀರಾ ? ಇವತ್ತು ಏನು ಲೀಸ್ ಕೊಡುವ ವ್ಯವಸ್ಥೆ ಇದೆ, ಅದನ್ನು ಸುಲಭ ರೀತಿಯಲ್ಲಿ ಜಾರಿಗೆ ತಂದು ಸರಿಯಾದ ರೀತಿಯಲ್ಲಿ ಸರ್ಕಾರಕ್ಕೆ ಆದಾಯ ಬರುವಂತೆ ನಿಯಮಾವಳಿ ಮಾಡಿ ಸರ್ಕಾರಕ್ಕೆ ಬರುವ ರಾಯಲ್ಟಿ